ಅಬ್ಬರವೇರುತ್ತ ಗೋಳಿಡುವ ತೇಪೆರಸ್ತೆ ಕಂಡಿತು. ಬಾಲ್ಕನಿಯಲ್ಲಿ ನಿಂತು ಕಾಫಿ ಗುಟುಕರಿಸುತ್ತಿದ್ದವನಿಗೆ ಕೆಳಗಡೆ ಏನೋ ಗದ್ದಲ ಕೇಳಿ ಅತ್ತ ಹಣುಕಿದ. ಶಂಕ್ರಜ್ಜನ ಮನೆಯ ಕೆಳಗೆ ಜನ ಗುಂಪುಗೂಡುತ್ತಿದ್ದರು. ಒಬ್ಬಾತ ಕಸದ ತೊಟ್ಟಿ ಹತ್ತಿರ ಬಿದ್ದಿದ್ದ ಪ್ಲೈವುಡ್ ಚೂರು ಹೆಕ್ಕಿ ರಸ್ತೆಪಕ್ಕದ ಮರದ ಒಣಗಿದ ಗೆಲ್ಲು ಮುರಿದು ಒಟ್ಟುಮಾಡಿ ಕಂಪೌಂಡಿಗೆ ತಾಗಿ ಬೆಂಕಿ ಹಾಕುವ ಪ್ರಯತ್ನದಲ್ಲಿ ತೊಡಗಿದ. ಎಳನೀರು, ತರಕಾರಿ ಮಾರುವವರು ನಿಂತು ವಿಷಾದ ಚಹರೆಗೆ ಬದಲಾಗುತ್ತಿದ್ದರು. ಪದ್ಮನಾಭ ಕಪ್ಪನ್ನು ಹಾಗೇ ಬಿಟ್ಟು ಬೀಗ ಹಾಕಿಕೊಂಡು ಕೆಳಗಿಳಿದು ಬಂದ.

'ಶಂಕ್ರಜ್ಜ ಹೋಗ್ಬಿಟ್ರೂರೀ...' ಅಂದರು ಕೆಳಗಿನ ಮನೆ ರಾಮೇಗೌಡರು. 'ನಿದ್ದೇಲೆ ಹೊರಟ್ಹೋಗಿದಾರೆ. ದಿನಾ ನನ್ಹತ್ರ ಎರಡು ಮಾತಾಡ್ದೂ ಆಡದಿದ್ರೆ ಸಮಾಧಾನವಿರ್ತಿರ್ಲಿಲ್ಲ ಪುಣ್ಯಾತ್ಮ. ನಿನ್ನೆ ರಾತ್ರಿ ಮಾತಾಡಿದೀವಿ; ಇವತ್ತಿಲ್ಲ ಅಂದ್ರೆ ಏನ್ಹೇಳೋಣ? ಮೇಲಿನವನು ಯಾವಾಗ ಯಾರ್ನ ಕರೆಸ್ಕೋತಾನೆ ಯಾರ್‌ಕಂಡಿದಾರೆ?...' ಆಕಾಶಕ್ಕೆ ಕೈಮುಗಿದ ಮುನಿರೆಡ್ಡಿ. 'ಎಂತಾ ಸುಖದ ಮರಣ. ಭೂಮಿ ಮೇಲಿಂದೇನಪ್ಪ... ನಾಕುದಿವಸದಾಟ...' ಸೊಪ್ಪು ಮಾರೋ ದೇವಮ್ಮ.

'ಏನಾದ್ರು ಕಾಯಿಲೆ... ತೊಂದರೆ?' ವಿಚಾರಿಸಿದ ಪದ್ಮನಾಭ. 'ಛೇ!... ಎಂತದೂ ಇಲ್ಲ. ಆ ಕಾಲದವ್ರು ಅವರು. ಕಬ್ಬಿಣ ಕಬ್ಬಿಣದಂತೆ ಗಟ್ಟಿ. ಈ ವಯಸ್ಸಿನಲ್ಲೂ ಎರಡು ಮೈಲು ಉಸ್ಸೆನ್ನದೆ ನಡೆಯೋರು.' ಒಳಗೆ ಯಾರೋ ಅಳುತ್ತಿದ್ದರು. 'ಮೊಮ್ಮಗಳು ಪಾಪ! ತಾತನ್ನ ಬಿಟ್ರೆ ಮತ್ಯಾರು ಇಲ್ಲ. ಗಾರ್ಮೆಂಟು ಫ್ಯಾಕ್ಟರಿಗೆ ಇವತ್ತು ರಜ. ಇಲ್ದಿದ್ರೆ ಇಷ್ಹೊತ್ತಿಗೆ ತಾತ್ನಿಗೆ ತಿಂಡಿ ಮಧ್ಯಾನದೂಟ ಮಾಡಿಟ್ಟು ಹೊರಟ್ಹೋಗಿರೋಳು. ತಾತ ಸತ್ಹೋಗಿರೋದೂ ಗೊತ್ತಾಗ್ತಿರಲಿಲ್ಲ!'

'ಮತ್ತೀಗ ಮುಂದೆ ಹೇಗೆ?' 'ನೆರೆಹೊರೆ ನಾವೇ ಮಾಡಬೇಕು, ದೇವ್ರ ಕೆಲಸ ಇದೂವೆ...'

ಎಲ್ಲ ತಯಾರಿ ನಡೆಯಿತು. ಯಾರೋ ದೂರದ ಚಿಕ್ಕಮ್ಮ ಅಂತೊಬ್ಬ ವಯಸ್ಸಾದವರು ರಿಕ್ಷಾದಲ್ಲಿ ಬಂದಿಳಿದರು. ದುಡ್ಡು ಒಟ್ಟಾಯಿತು. ಪದ್ಮನಾಭನೂ ಐನೂರು ಕೊಟ್ಟ. ಹದಿನೈದಿಪ್ಪತ್ತು ಜನ ಓಡಾಡಿದರು. ವ್ಯಾನು ಬಂತು. ಎರಡುಗಂಟೆ ಹೊತ್ತಿಗೆ ಮಣ್ಣುಮಾಡಿ ಅವರವರ ಮನೆ ಸೇರಿದರು.

★★★

ರಾತ್ರಿ ಹಾಸಿಗೆ ಮೇಲೆ ಅಡ್ಡಾಗಿದ್ದ ಪದ್ಮನಾಭನಿಗೆ ಎಲ್ಲಾ ವಿಚಿತ್ರವೆನ್ನಿಸುತ್ತಿತ್ತು. ತಾನಿಂದು ಶಂಕ್ರಜ್ಜನ ಫೋಟೊ ತೆಗೆಯದಿದ್ದರೆ ಮತ್ತೆಂದೂ ಸಾಧ್ಯವೇ ಇರಲಿಲ್ಲ. ಹೊಂಬಣ್ಣದ ಬೆಳಕಿನ ಲಾಸ್ಯ ತನ್ನ ಕಣ್ಣಿಗೆ ಎರಡು ದಿನ ಹಿಂದೆ ಗೋಚರಿಸಿ, ಇವತ್ತೇ ತೆಗೆಯಲು ಪ್ರೇರಣೆ ಬಂದು... ಆದರೆ ತಾನು ಫೋಟೊ ತೆಗೆಯುವಾಗ... ಆಗಲೇ ಸತ್ತಿದ್ದನೇ? ತಾನು ಶವದ ಫೋಟೊ ತೆಗೆದೆನೇ? ಏನೋ ಸೂತಕದ ಭಾವ ಆವರಿಸಿ ಫೋಟೊ ಅಳಿಸುವ ಆಲೋಚನೆಯುಂಟಾಗಿ ಮೊಬೈಲ್ ತೆಗೆದ. ವಿಡಿಯೊ ಚಲಿಸತೊಡಗಿತು. ಸರಿಯುವ ಹೊಂಬಣ್ಣ ಮಲಗಿದ ಶರೀರದ ಗಲ್ಲದ ಹತ್ತಿರ. ಅಷ್ಟರಲ್ಲಿ ಏನೋ ಅಡ್ಡಿ ಮುಖದಮೇಲೆ ನೆರಳಾಗುವಂತೆ, ಎರಡು ಕೈಗಳು... ತೂಗುವ ಜಡೆ. ಶರೀರ ಮಿಸುಕಾಡಿತೇ? ಅರೆ! ಏನೋ ಇದೆ ಅನ್ನಿಸಿ ವಿಡಿಯೊ ಮತ್ತೆ ಮತ್ತೆ ಪರಾಂಬರಿಸಿದ. ಝೂಂ ಮಾಡಿ ಪುನಃ ನೋಡಿದ. ಹೇಗೆ ನೋಡಿದರೂ ತನಗನಿಸುತ್ತಿದ್ದದ್ದು ನಿಜ ಅನಿಸಿ ವಿಚಲಿತನಾದ. ಮೊಬೈಲ್ ಪಕ್ಕಕ್ಕಿಟ್ಟು ಅಂಗಾತ ಮಲಗಿದವನಿಗೆ ನಿದ್ದೆ ಹತ್ತಿರ ಸುಳಿಯಲಿಲ್ಲ. ತಾನೀಗ ಏನು ಮಾಡಬೇಕು? ಬೇರೆಬೇರೆ ಕೋನಗಳಲ್ಲಿ, ಬೇರೆಬೇರೆ ಸಾಧ್ಯತೆಗಳು.